ಸಾಕ್ಷಿಯನ್ನು ದಿನಾಂಕ 17.02.2021 ರಂದು ಕರೆಸಿ ಪ್ರಮಾಣ ವಚನ ಬೋದಿಸಲಾಯಿತು.
ಮುಂದುವರಿದ ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಿಂದಃ

4. ನನ್ನ ತಂದೆಗೆ ಚಿಕ್ಕಮ್ಮ ಮತ್ತು ನಿಂಗಮ್ಮ ಎಂಬ ಇಬ್ಬರು ಹೆಂಡತಿಯರು ಇರುತ್ತಾರೆ ಎಂದರೆ ಸರಿ. ಅದರಲ್ಲಿ ಚಿಕ್ಕಮ್ಮ ರವರು ಮೃತಪಟ್ಟಿರುತ್ತಾರೆ ಎಂದರೆ ಸರಿ. ಚಿಕ್ಕಮ್ಮ ರವರಿಗೆ ಸಾಕಮ್ಮ, ಸಣ್ಣಮ್ಮ ಹಾಗೂ ಪುಟ್ಟಮ್ಮ ಎಂಬ ಮೂವರು ಹೆಣ್ಣು ಮಕ್ಕಳು ಎಂದರೆ ಸರಿ. ಸದರಿ ಮೂವರು ಹೆಣ್ಣು ಮಕ್ಕಳ ಪೈಕಿ ಸಾಕಮ್ಮ ಮತ್ತು ಸಣ್ಣಮ್ಮ ಮೃತಪಟ್ಟಿರುತ್ತಾರೆ. ಅವರ ಮಕ್ಕಳು ಜೀವಂತವಾಗಿರುತ್ತಾರೆ. ನಾನು ಈ ಕೇಸಿನಲ್ಲಿ ಚಿಕ್ಕಮ್ಮ ರವರ ಮಕ್ಕಳನ್ನು ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ ಎಂದರೆ ಸರಿ. 1 ನೇ ಪ್ರತಿವಾದಿಗೆ ದೊರೆರಾಜು, ಲೋಕೇಶ, ಚಿನ್ನಮ್ಮ ಮತ್ತು ಕೆಂಪರಾಜು ಎಂಬ ಮಕ್ಕಳಿರುತ್ತಾರೆ ಎಂದರೆ ಸರಿ. ಅವರ ಮಕ್ಕಳನ್ನು ಈ ದಾವೆಯಲ್ಲಿ ಪಕ್ಷಗಾರರಾನ್ನಾಗಿ ಮಾಡಿರುವುದಿಲ್ಲ ಎಂದರೆ ಸರಿ. ನಾನು ಹಾಜರುಪಡಿಸಿರುವ ದಾಖಲೆಗಳ ಬಗ್ಗೆ ನನಗೆ ಸಂಪೂರ್ಣ ಮಾಹಿತಿ ಇರುತ್ತದೆ. ದಾವಾ ಸ್ವತ್ತು ಯಾರಿಗೆ ಮಾರಾಟವಾಗಿರುತ್ತದೆ ಎಂದು ತೋರಿಸಲು ನಿಪಿ.6 ನ್ನು ಪಡೆದುಕೊಂಡಿರುತ್ತೇನೆ.

5. ದಿನಾಂಕ 30.07.2013 ರಂದು ನಿಪಿ.6 ನ್ನು ಪಡೆದುಕೊಂಡಿರುತ್ತೇನೆ ಎಂದರೆ ಸರಿ. ಸದರಿ ಇ ಸಿ ಪಡೆದುಕೊಂಡ ದಿನಾಂಕದಂದು ದಾವಾ ಸ್ವತ್ತನ್ನು 10 ನೇ ಪ್ರತಿವಾದಿಗೆ ಮಾರಾಟ ಮಾಡಿದ ವಿಚಾರ ನನಗೆ ತಿಳಿದಿರುತ್ತದೆ ಎಂದರೆ ಸರಿ. ನಾನು ನಿಪಿ.6 ಪಡೆದುಕೊಂಡ ವರ್ಷದಲ್ಲಿಯೇ ದಾವೆಯನ್ನು ಸಲ್ಲಿಸಿರುತ್ತೇನೆ. 10 ನೇ ಪ್ರತಿವಾದಿಯ ಹೆಸರಿಗೆ ಆದ ಕ್ರಯಪತ್ರದ ನಕಲನ್ನು ನಾನು ಪಡೆದುಕೊಂಡಿರುತ್ತೇನೆ ಸದರಿ ಕ್ರಯಪತ್ರದ ನಕಲನ್ನು ಯಾವ ದಿನಾಂಕ ಪಡೆದುಕೊಂಡಿರುತ್ತೇನೆ ಎಂದು ನನಗೆ ನೆನಪಿಲ್ಲ ನಾನು ಆರ್.ಎ ಸಂಖ್ಯೆ 145/2013-14 ರಲ್ಲಿ ಎಂ.ಆರ್ ಹೆಚ್.3/2012-13 ರ ಮ್ಯುಟೇಶನ್ ಅನ್ನು ಪ್ರಶ್ನೆ ಮಾಡಿರುತ್ತೇನೆ ಎಂದರೆ ಸರಿ. ಸದರಿ ಅರ್ಜಿ ವಜಾವಾಗಿರುತ್ತದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ನಾವು ಹೋಗದ ಕಾರಣ ವಜವಾಗಿರುತ್ತದೆ ಎನ್ನುವರು. ಸದರಿ ಕ್ರಯದ ನಕಲು ಮತ್ತು ಮೇಲ್ಮನವಿಯ ಆದೇಶದ

ನಕಲನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ ಎಂದರೆ ಸರಿ. ಅಂಗಾಮಿ ಮತ್ತು ಖಾಯಂ ಸಾಗುವಳಿ ಚೀಟಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ನಿಪಿ.9 ರಲ್ಲಿ ಏನು ಬರೆದಿದೆ ಎಂದು ನಾನು ತಿಳಿದುಕೊಂಡಿರುತ್ತೇನೆ. ನಿಪಿ.9 ಏನು ದಾಖಲೆ ಎಂದು ನನಗೆ ಗೊತ್ತಾಗುತ್ತಿಲ್ಲ. ನಿಪಿ.9 ರ ಮೇಲೆ ಆದೇಶವಾಗಿರುವುದಿಲ್ಲ. ನನ್ನ ತಂದೆ ದಾವಾ ಸ್ವತ್ತು ಮಂಜೂರು ಮಾಡಬೇಕೆಂದು ಸಲ್ಲಿಸಿದ ಅರ್ಜಿಯಲ್ಲಿ ಆತನ ಕುಟುಂಬದಲ್ಲಿ 12 ಜನ ಇರುತ್ತಾರೆ ಎಂದು ತಿಳಿಸಿರುತ್ತಾರೆ. ನಮ್ಮ ತಂದೆ ಮತ್ತು ಅವರ ಸೋದರರು ಒಂದೇ ಕುಟುಂಬಲ್ಲಿ ವಾಸ ಮಾಡಿಕೊಂಡು ಇದ್ದರು. ಅದರ ಬಗ್ಗೆ ನನಗೆ ಖುದ್ದು ಮಾಹಿತಿ ಇರುವುದಿಲ್ಲ. ದಾವಾ ಸ್ವತ್ತು ನನ್ನ ತಂದೆಯ ಹೆಸರಿನಲ್ಲಿದ್ದಾಗ ವಜಾ ಆಗಿರುತ್ತದೆ ಎಂದು ನನ್ನ ತಂದೆ ಹೇಳಿಕೆ ನೀಡಿರುತ್ತಾರೆ. ಸದರಿ ವಜಾ ಆದ ನಂತರ ನನ್ನ ತಂದೆಯ ಹೆಸರಿಗೆ ಸಾಗುವಳಿ ಚೀಟಿಯನ್ನು ಪುನಃ ನೀಡಿರುತ್ತಾರೆ. ಸದರಿ ಸಾಗುವಳಿ ಚೀಟಿಯನ್ನು ನ್ಯಾಯಾಲಯಕ್ಕೆ ಕೊಟ್ಟಿರುತ್ತೇನೆ. ಸಾಕ್ಷಿ ಮುಂದುವರೆದು ಮಂಜೂರಾದ ದಾಖಲೆ ನೀಡಿರುತ್ತೇನೆ ಎನ್ನುವರು.

6. ಉಪ ವಿಭಾಗಾಧಿಕಾರಿಗಳ ಮುಂದೆ ನಾನು ದಾವಾ ಸ್ವತ್ತು ನಮ್ಮ ಪಿತ್ರಾರ್ಜಿತ ಆಸ್ತಿ ಎಂದು ಅರ್ಜಿಯಲ್ಲಿ ತಿಳಿಸಿರುತ್ತೇವೆ ಎಂದರೆ ಸರಿ. ದಾವಾ ಸ್ವತ್ತು ನನ್ನ ಅಜ್ಜನ ಆಸ್ತಿಯಾಗಿರುವುದಿಲ್ಲ ಎಂದರೆ ಸರಿ. ದರಖಾಸ್ತು ಮಂಜೂರಾದ ನಂತರ ನನ್ನ ತಂದೆಯ ಹೆಸರಿಗೆ ಯಾವುದಾದರು ದಾಖಲೆಗಳು ಆಗಿರುತ್ತದೊ ಇಲ್ಲವೊ ನನಗೆ ಗೊತ್ತಿಲ್ಲ. ಏಕೆಂದರೆ 1990 ಇಸವಿಯಲ್ಲಿ ಕೆಲಸಕ್ಕೆ ಬೇರೆ ಕಡೆ ಹೊರಟುಹೋಗಿರುತ್ತೇನೆ. ನಾನು ಹಾಜರುಪಡಿಸಿರುವ ನಿಪಿ.1 ರಿಂದ 3 ರ ದಾಖಲೆಗಳಲ್ಲಿ 1 ನೇ ಪ್ರತಿವಾದಿಯ ಗಂಡ, 9 ನೇ ಪ್ರತಿವಾದಿಯ ತಂದೆ ಮತ್ತು 10 ನೇ ಪ್ರತಿವಾದಿಯ ಹೆಸರು ಕಂಡುಬರುತ್ತಿದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಅದು ಸೃಷ್ಟಿಸಿದ ದಾಖಲೆ ಎನ್ನುತ್ತಾರೆ. 1960 ನೇ ಇಸವಿಯಿಂದ ದಾವಾ ಸ್ವತ್ತಿನ ಸ್ವಾಧೀನ ನನ್ನ ತಂದೆ ಹೊಂದಿದ್ದರು ಎಂದರೆ ಸಾಕ್ಷಿ 1985 ನೇ ಇಸವಿಯಿಂದ ಪಹಣಿಯನ್ನು ಹಾಜರುಪಡಿಸಿರುತ್ತೇನೆ

ಎನ್ನುವರು. 1 ರಿಂದ 9 ನೇ ಪ್ರತಿವಾದಿಗಳು ಆಲನಹಳ್ಳಿ ಗ್ರಾಮಸ್ಥರು ಎಂದರೆ ಸರಿ. ತಿಮ್ಮಯ್ಯ ಮತ್ತು ದಾಸಯ್ಯ ರವರು ಅಣ್ಣ-ತಮ್ಮಂದಿರು ಎಂದರೆ ಸರಿ. ಅವರಿಗೆ ಪಿತ್ರಾರ್ಜಿತ ಆಸ್ತಿ ಇತ್ತೊ ಇಲ್ಲವೊ ನನಗೆ ಗೊತ್ತಿಲ್ಲ. ದಾವಾ ಸ್ವತ್ತು ಮೂಲತಃ ಸರ್ಕಾರಿ ಜಮೀನು ಎಂದರೆ ಸರಿ. ಸದರಿ ಸ್ವತ್ತನ್ನು ತಿಮ್ಮಯ್ಯ ಮತ್ತು ದಾಸಯ್ಯ ರವರು ಜಂಟಿಯಾಗಿ ವ್ಯವಸಾಯ ಮಾಡಿಕೊಂಡು ಬರುತ್ತಿದ್ದರು ಎಂದರೆ ಸರಿಯಲ್ಲ. ತಿಮ್ಮಯ್ಯ ಮತ್ತು ದಾಸಯ್ಯ ಮೃತಪಟ್ಟಿರುತ್ತಾರೆ ಎಂದರೆ ಸರಿ. ಅವರು ಮೃತಪಟ್ಟ ನಂತರ ಅವರ ಮಕ್ಕಳು ಸ್ವಾಧೀನಹೊಂದುಕೊಂಡು ಖಾತೆ ಮಾಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಅನೇಕ ವರ್ಷ ಅವರು ಸ್ವಾಧೀನ ಹೊಂದಿದ ಕಾರಣ ತಿಮ್ಮಯ್ಯ ಮತ್ತು ದಾಸಯ್ಯ ರವರ ಹೆಸರಿನಲ್ಲಿ ಪಹಣಿ ನಮೂದಾಗಿರುತ್ತದೆ ಎಂದರೆ ಸರಿಯಲ್ಲ.

7. ತಿಮ್ಮಯ್ಯ ಮತ್ತು ದಾಸಯ್ಯ ರವರ ಹೆಂಡತಿ ಮತ್ತು ಮಕ್ಕಳು ಪೌತಿ ವಾರಸ್ಸು ಮೇರೆ ಖಾತೆ ಬದಲಾವಣೆ ಮಾಡಿಕೊಂಡಿರುತ್ತಾರೆ ಎಂದರೆ ಸಾಕ್ಷಿ ತಿಮ್ಮಯ್ಯ ನಮ್ಮ ಕುಟುಂಬಸ್ಥರು ಎಂದು ನಾವು ಅನೇಕ ವರ್ಷ ಸುಮ್ಮನಿದ್ದೆವು ಎನ್ನುವರು. ಪ್ರತಿವಾದಿ 1 ರಿಂದ 9 ರವರು ಖಾತೆ ಮಾಡಿಸಿಕೊಂಡು ಅವರು ಆ ಸ್ವತ್ತನ್ನು 10 ನೇ ಪ್ರತಿವಾದಿಗೆ ಮಾರಾಟ ಮಾಡುವವರೆಗೂ ಸ್ವಾಧೀನ ಹೊಂದಿದ್ದರು ಎಂದರೆ ಸರಿಯಲ್ಲ. ದಾವಾ ಸ್ವತ್ತನ್ನು 10 ನೇ ಪ್ರತಿವಾದಿ ಖರೀದಿ ಮಾಡಿದ ನಂತರ ಈ ದಿನದವರೆಗೆ ಆಕೆಯೆ ಸ್ವಾಧೀನ ಹೊಂದಿರುತ್ತಾಳೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿಗೂ ನಮಗೂ ಯಾವುದೇ ರೀತಿಯ ಸಂಬಂಧವಿರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತನ್ನು ಕಬಳಿಸುವ ದುರುದ್ದೇಶದಿಂದ ನಾವು ಸುಳ್ಳು ದಾಖಲೆಗಳನ್ನು ಸೃಷ್ಟಿಮಾಡಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿ 10 ದಾವಾ ಸ್ವತ್ತಿನ ಸ್ವಾಧೀನಕ್ಕೆ ಯಾವ ದಿನಾಂಕದಂದು ತೊಂದರೆ ನೀಡಿರುತಾರೆ ಎಂದು ನಾನು ಹೇಳಲಾಗುವುದಿಲ್ಲ. ತೊಂದರೆ ನೀಡಿದಾಗ ಪೋಲೀಸ್ ಠಾಣೆಗೆ ದೂರು ಸಲ್ಲಿಸಿರುತ್ತೇನೆ. ಆದರೆ ಆ ವಿಚಾರವನ್ನು ವಾದಪತ್ರದಲ್ಲಿ ತಿಳಿಸಿರುವುದಿಲ್ಲ

ದಾವಾ ಸ್ವತ್ತು ನಮಗೆ ಸೇರಿರುವುದಿಲ್ಲ ಮತ್ತು ಅದರ ಸ್ವಾಧೀನವನ್ನು ಎಂದಿಗೂ ಹೊಂದಿರಲಿಲ್ಲ, ದಾವಾ ಸ್ವತ್ತನ್ನು ಕುಬಳಿಸುವ ದುರುದ್ದೇಶದಿಂದ ಸುಳ್ಳು ದಾವಾ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ.

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸಾ.ಸ.ಇ.ಒ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ
ಹೆಚ್.ಡಿ.ಕೋಟೆ.